**O.S. No.** 92/2018 **PW** 1

ದಿನಾಂಕಃ 05.07.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲು ಶ್ರೀ ಕೆ ವಿ ಡಿ ವಕೀಲರಿಂದ ಃ

ನಿಶಾನೆ ಪಿ 58 ತಿದ್ದುಪಡಿ ಪತ್ರವನ್ನು ಫೆಬ್ರವರಿ 2022 ರಲ್ಲಿ ಮಾಡಿಕೊಂಡಿರುತ್ತೇವೆ. ಸದರಿ ತಿದ್ದುಪಡಿ ಪತ್ರದಲ್ಲಿ ಚೆಕ್ಕುಬಂದಿಯನ್ನು ಸರಿಪಡಿಸುವ ಸಲುವಾಗಿ ಮಾಡಿಕೊಳ್ಳಲಾಗಿರುತ್ತದೆ. ನಿಪಿ 58 ತಿದ್ದುಪಡಿ ಪತ್ರವನ್ನು 2013 ರ ಕ್ರಯ ಪತ್ರದ ವಿಚಾರದಲ್ಲಿ ಮಾಡಲಾಗಿರುತ್ತದೆ. ನಿಪಿ 25 ಕ್ರಯ ಪತ್ರದಲ್ಲಿ

ತಪ್ಪಾಗಿದೆ ಎಂದು ನಾವು ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ ಸಂದರ್ಭದಲ್ಲಿ ತಿಳಿದುಬಂದಿರುತ್ತದೆ. ದಾವೆ ದಾಖಲಿಸಿದ ನಂತರ ವಿಚಾರಣೆ ಸಮಯದಲ್ಲಿ ಸರಿ ತಪ್ಪು ನಮ್ಮ ಗಮನಕ್ಕೆ



ಬಂದಿರುತ್ತದೆ. ನಿಪಿ 25 ರ ಚೆಕ್ಕುಬಂದಿಯನ್ನು ಪೊಡಿ ನಕಾಶೆ ನೋಡಿಯೇ ಬರೆಯಲಾಯಿತು. ಆದರೆ ಬರೆಯವಾಗ ತಪ್ಪು ಆಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ 25 ರ ಚೆಕ್ಕುಬಂದಿಯನ್ನು ಆದರಿಸಿರುವ ಪೋಡಿ ನಕಾಶೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. ಸದರಿ ಪೋಡಿ ನಕಾಶೆಯು ನಿಪಿ 12 ಆಗಿರುತ್ತದೆ. ಸದರಿ ನಿಪಿ 12 ದಾಖಲೆಯು ದಿಃ 15.12.1994 ರ ದಾಖಲೆಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 309(ಎ) ಯು 309/1 ದ 309/2 ಎಂದು 1994 ರಲ್ಲಿ ಪೋಡಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 309(ಬಿ) 1938 ಮತ್ತು 1940 ರ ನಡುವೆ ಗ್ರಾಮ ಠಾಣೆಗೆ ಹೋಗಿರುತ್ತದೆ ಎಂದರೆ ಸರಿಯಲ್ಲ. ನಿಪಿ 58 ತಿದ್ದುಪಡಿ ಪತ್ರ ನಿಪಿ 59 ರ ಆಧಾರದಲ್ಲಿ ಮಾಡಿರುವುದಿಲ್ಲ. ನಿಪಿ 59 ರಲ್ಲಿ ತೋರಿಸಲಾದ ಲಿಂಕ್ ರಸ್ತೆ 25 ರಿಂದ 30 ಅಡಿ ಉದ್ದ ಇರಬಹುದು. ಸದರಿ ರಸ್ತೆ ಯಾವ ಸರ್ವೆ ನಂಬರ್ ನಲ್ಲಿ ಬರುತ್ತದೆ ಎಂದು ಗೊತ್ತಿಲ್ಲ. ನಿಪಿ 59 ರಲ್ಲಿ ಬ್ಲಾಕ್ 3 ಎಂದು ತೋರಿಸಲಾದ ಜಾಗ ಎಷ್ಟು ವಿಸ್ತೀರ್ಣ ಇದೆ ಎಂದು ನನಗೆ ಗೊತ್ತಿಲ್ಲ. ನಿಪಿ 59 ಸ್ಕೆಚ್ ಸರ್ವೆ ನಂ. 309/1 ಹಾಗೂ 309/2 ಕ್ಕೆ ಸಂಬಂಧಪಟ್ಟಿದ್ದಾಗಿರುತ್ತದೆ. ನಿಪಿ 59 ರಲ್ಲಿ ಬ್ಲಾಕ್ ನಂ. 3 ಗ್ರಾಮ ಠಾಣಾ ಎಂದು ನಮೂದು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ 24 ಮತ್ತು ನಿಪಿ 59 ಎರಡೂ ಒಂದೇ ಹೋಲಿಕೆ ಇರುವ ನಕಾಶೆಗಳು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನ. 309(ಎ) ಸರ್ವೆ ನ. 309/1 ಮತ್ತು 309/2 ಎಂದು ಪೋಡು ಆಗಿದ್ದು, ಸರ್ಕಾರಿ ಜಾಗವನ್ನು ಲಪಟಾಯಿಸುವ ಉದ್ದೇಶದಿಂದ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿಯು ಸರ್ವೆ ನಂ. 309(ಬಿ) ಸರ್ವೆ ನಂ. 309/1 ಮತ್ತು 309/2 ಪೋಡು ಆಗಿರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂ 309(ಬಿ) 1938 ರಿಂದ 1940 ರ ಸಾಲಿನಲ್ಲಿ ಗ್ರಾಮ ಠಾಣಕ್ಕೆ ಸೇರ್ಪಡೆಯಾಗಿದ್ದು ಅದರ ಕಂದಾಯ ಜಮೀನಾಗಿ ಉಳಿದುಕೊಂಡಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ. 309 ಬಿ ಗ್ರಾಮ ಠಾಣಾಕ್ಕೆ ಹೋದನಂತರ ಕಂದಾಯ ಅಧಿಕಾರಿಗಳ ತಪ್ಪಿನಿಂದ ಆರ್ ಟಿ ಸಿಯು ಮಮುಂದುವರಿದಿದ್ದು, ಅದರ ದುರ್ಲಾಭಪಡಿಸಿಕೊಂಡು 2003 ರಲ್ಲಿ ಕ್ರಯ ಪತ್ರ ಸೃಷ್ಟಿಸಿಕೊಂಡು 309 (ಎ) 309/1 ಮತ್ತು 309/2 ಎಂದು ಪೋಡ್ ಆಗಿದ್ದು, ಸದರಿ ಜಮೀನನ್ನು ಲಪಾಟಾಯಿಸುವ ಉದ್ದೇಶದಿಂದ ಸುಳ್ಳು ದಾಖಲೆಗಳ ಆಧಾರದಲ್ಲಿ ಈ ಸುಳ್ಳು ದಾವೆ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸರ್ವೆ.ನಂ. 309(ಎ), 309(ಬಿ), 309/1, 309/2 ಯಾವುದರಲ್ಲೂ ಸ್ವಾಧೀನ ಇಲ್ಲಾ ಎಂದರೆ ಸರಿಯಲ್ಲ. ಸುಳ್ಳು ದಾಖಲೆಗಳ

ಆಧಾರದ ಮೇಲೆ ಭೂ ಪರಿವರ್ತನೆ ಆದೇಶವನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂ 309/1 ರ ಪಹಣಿ ಪತ್ರಿಕೆಯಲ್ಲಿ ನನ್ನ ಹೆಸರಿನಲ್ಲಿ ಇರುವ ಖಾತೆಯನ್ನು ರದ್ದು ಮಾಡಲು ಎ ಸಿ ನ್ಯಾಯಾಲಯದಲ್ಲಿ



ಅಪೀಲು ಇತ್ಯರ್ಥಕ್ಕೆ ಬಾಕಿ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಸದರಿ ಪ್ರಕರಣ ವಜಾ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ, ಕಾರಣ ಅದು ಇತ್ತೀಚೆಗೆ ಆದ ಪ್ರಕರಣ ಆಗಿರುತ್ತದೆ.

ತೆ ನ್ಯಾ ಬೆ ಮಾಡಲಾಯಿತು.

ಓ ಹೇ ಕೇ ಸರಿಯಿದೆ.

ಪ್ರಧಾನ ವ್ಯವಹಾರ ನ್ಯಾಯಾಧೀಶರು,

ತೀರ್ಥಹಳ್ಳಿ